ವಿಚಾರ

# ಶತಕೋಟಿ ಡಾಲರ್ ನೋಡುವ ಜಾಗ

**ನಮ್ಮೆಲ್ಲರ ಕೈಯಲ್ಲಿ ಚಲಾವಣೆಯಾಗುವ ನೋಟು ರೂಪುಗೊಳ್ಳುವ ಪ್ರಕ್ರಿಯೆ ಹೇಗಿರುತ್ತದೆ? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ, ಅಮೆರಿಕದ ಟೆಕ್ಸಾಸ್‌ನಲ್ಲಿನ ಡಾಲರ್‌ಗಳ ಮುದ್ರಣಾಲಯದೊಳಗೆ ಒಂದು ಸುತ್ತು.**

**■ ಸೀತಾ ಕೇಶವ**

ಇತ್ತೀಚಿನ ಅಮೆರಿಕ ಪ್ರವಾಸದಲ್ಲಿ ‘ಬ್ಯೂರೋ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ (ಫೋರ್ಟ್‌ವರ್ತ್ ಟೆಕ್ಸಾಸ್‌ನಲ್ಲಿದೆ) ಸಂಸ್ಥೆಯನ್ನು ನೋಡಲು ಹೋದೆವು. ನೂರಾರು ಕೋಟಿ ಡಾಲರ್ ನೋಟುಗಳನ್ನು ಕಣ್ತುಂಬಿಕೊಳ್ಳುವ ಹಿಗ್ಗು ನಮ್ಮದಾಗಿತ್ತು.

‘ಬ್ಯೂರೋ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ ಭವನದೊಳಗೆ ಪ್ರವೇಶ ಸರಳವಾದುದಲ್ಲ. ವಿಮಾನ ನಿಲ್ದಾಣಗಳಿಗಿಂತಲೂ ಹೆಚ್ಚಿನ ಭದ್ರತೆ ಹಾಗೂ ತಪಾಸಣೆ ಅಲ್ಲಿರುತ್ತದೆ. ಗಡಿಯಾರ, ಕೈಯಲ್ಲಿನ ಬ್ಯಾಗ್, ಮೊಬೈಲ್ ಫೋನ್ ಒಂದನ್ನೂ ಒಳಗೆ ಬಿಡುವುದಿಲ್ಲ. ಕಾರಿನ ಪಾರ್ಕಿಂಗ್ ಸ್ಥಳದಿಂದ ಅವರ ವಾಹನದಲ್ಲೇ ಮುಂದೆ ಸಾಗಬೇಕು. ನಡಿಗೆಗೆ ಅವಕಾಶವಿಲ್ಲ. ಕಟ್ಟಡದ ಫೋಟೊ ತೆಗೆಯುವುದಂತೂ ಸಾಧ್ಯವೇ ಇಲ್ಲ.

ತಪಾಸಣಾ ಪ್ರಕ್ರಿಯೆ ಮುಗಿಸಿಕೊಂಡು ಒಳಹೊಕ್ಕರೆ ಸ್ವಾರಸ್ಯಕರ ಲೋಕವೊಂದು ಅನಾವರಣಗೊಳ್ಳುತ್ತದೆ. ಮೊದಲಿಗೆ, ‘ಬ್ಯೂರೋ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ನ ಗ್ಯಾಲರಿಯಲ್ಲಿ ಕೂತು ನೋಟು ರೂಪುಗೊಳ್ಳುವುದರ ಸಂಕ್ಷಿಪ್ತ ಕಥನವನ್ನು ನೋಡಬಹುದು. ಅದಾದ ನಂತರ ನಿಜದ ಪಯಣ ಆರಂಭ.

ಪ್ರತಿಯೊಬ್ಬ ಸಂದರ್ಶಕರಿಗೂ ಸ್ವಯಂ ನಿರ್ದೇಶಿತ

